13

# ದೇವರು ಕೇಡನ್ನು ಸೃಷ್ಟಿಸಿದನೋ?

ದೇವರನ್ನು ದಯೆಯುಳ್ಳವನೂ, ಒಳ್ಳೆಯವನೂ ಮತ್ತು ಕೇಡನ್ನು ಮಾಡದವನೂ ಎಂಬ ಭಾವನೆಯೊಂದಿಗೆ ಬೆಳೆದವನು, ಬೈಬಲಿನಲ್ಲಿಯ ಈ ವಾಕ್ಯವನ್ನು ಓದುವಾಗ ಆಘಾತಕ್ಕೊಳಗಾಗ ಬಹುದು: "ನಾನು ಬೆಳಕಿಗೂ ಕತ್ತಲಿಗೂ ಸೃಷ್ಟಿಕರ್ತನು, ಮೇಲನ್ನೂ ಕೇಡನ್ನೂ ಬರಮಾಡುವವನು, ಈ ಸಮಸ್ತ ಕಾರ್ಯಗಳನ್ನು ನಡೆಯಿಸುವ ಯೆಹೋವನು ನಾನೇ ಎಂದು ತಿಳಿದುಕೊಳ್ಳುವರು" (ಯೆಶಾಯ 45:7; KJV).[1]

ಕೆಡುಕಿನ ಅಸ್ತಿತ್ವವು ದೇವರಲ್ಲಿ ಒಳ್ಳೇಯತನದ ಇಲ್ಲವೇ ಬಲದ ಕೊರತೆಯನ್ನು ತೋರಿಸುತ್ತದೆ ಎಂದು ಡೇವಿಡ್ ಹ್ಯೂಮ ವಾದಿಸಿದನು. ಪುರಾತನ ಅಥೆನೆಯ ತತ್ವಜ್ಞಾನಿ ಎಪಿಕ್ಯುರಸನು ಈ ಪ್ರಶ್ನೆಗಳನ್ನು ಮುಂದಿರಿಸಿದನು:

> ಆತನು ಕೆಡುಕನ್ನು ತಡೆಯಲು ಮನಸ್ಸುಳ್ಳವನಾಗಿರುವನೋ, ಆದರೆ ಶಕ್ತನಾಗಿರುದಿಲ್ಲವೋ? ಆಗ ಆತನು ಶಕ್ತಿಹೀನನಾಗಿರುವನೋ? ಆತನು ಶಕ್ತನಾಗಿದ್ದು, ಮನಸ್ಸಿಲ್ಲದವನಾಗಿರುವನೋ? ಆಗ ಆತನು ಇತರರಿಗೆ ಕೇಡು ಬಯಸುವವನಾಗಿರುವನು. ಆತನು ಶಕ್ತನೂ ಮನಸ್ಸುಳ್ಳವನೂ ಎರಡೂ ಆಗಿರುವನೋ? ಹಾಗಾದರೆ ಕೆಡುಕು ಎಲ್ಲಿಂದ?[2]

ಇದು ಎಲ್ಲಾ ಸಂಗತಿಗಳ ಜ್ಞಾನವನ್ನು ಒಪ್ಪಿಕೊಳ್ಳುವ ಮಿತಿಮೀರಿದ ಚರ್ಚೆಯಾಗಿದ್ದರೂ, ಅನೇಕ ಯಥಾರ್ಥರಾದ ವ್ಯಕ್ತಿಗಳು ಕೆಡುಕಿನ ಧೈತ್ಯಾಕಾರದ ಸಮಸ್ಯೆಯೊಂದಿಗೆ ಹೋರಾಡಿರುವರು. ಮನುಷ್ಯನು ಪೂರ್ಣ ಉತ್ತರವನ್ನು ಕೊಡಲು ಅಶಕ್ತನಾಗಿರುವಂತೆ ತೋರುವುದು. ಆದರೆ ಬೈಬಲಿನ ಪ್ರಕಟನೆಯು ಕೆಲವು ಉತ್ತರಗಳನ್ನು ಕೊಡುತ್ತದೆ, ಹಾಗೆಯೇ ವ್ಯಾವಹಾರಿಕ ಪರಿಹಾರವನ್ನೂ ಕೊಡುತ್ತದೆ.

## ದೇವರು ನೈತಿಕ ಕೆಡುಕಿನ ಕಾರಣವಾಗಿರುವದಿಲ್ಲ

ಒಂದಕ್ಕಿಂತ ಹೆಚ್ಚು ರೀತಿಯ ಕೆಡುಕು ಇದೆ ಎಂದು ಬೈಬಲ್ ತೋರಿಸುತ್ತದೆ. ನೈತಿಕ ಕೆಡುಕು (ಕೊಲೆಯಂಥದ್ದು) "ಶುದ್ಧ"ನಾಗಿರುವಾತನಿಗೆ ಸಂಪೂರ್ಣವಾಗಿ ಪರಕೀಯವಾದದ್ದಾಗಿದೆ (1 ಯೋಹಾನ 3:3). ನಮ್ಮ ದೇವರು "ನಿರ್ವಂಚಕನಾದ ನಂಬಿಗಸ್ತ ದೇವರು, ನೀತಿಯುಳ್ಳವನೂ ಯಥಾರ್ಥನೂ ಆಗಿದ್ದಾನೆ" (ಧರ್ಮೋಪದೇಶ ಕಾಂಡ 32:4). "ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ" (ಯಾಕೋಬ 1:13) ಎಂದು ಪ್ರೇರೇಪಿತ ಯಾಕೋಬನು ಒಪ್ಪಿಕೊಂಡಿದ್ದಾನೆ. ದೇವರು "ಪ್ರೀತಿಯು" ವ್ಯಕ್ತೀಕರಣವಾಗಿದ್ದಾರೆ (1 ಯೋಹಾನ 4:8), ಆತನು ಕೇಡನ್ನು ಹೊಂದಿಕೊಂಡಿರುವದು ಅಸಾಧ್ಯವಾದದ್ದಾಗಿರುತ್ತದೆ. ಹೀಗಿರುವಾಗ ನೈತಿಕ ಕೆಡುಕು ದೇವರನ್ನು ದಾಟಿ ಇರುತ್ತದೆ.

## ಅವಿಧೇಯತೆಗೆ ಶಿಕ್ಷೆಯಂತೆ ದೇವರು ಕೆಡುಕಿಗೆ ಕಾರಣನಾಗಿದ್ದಾನೆ

ಯಾವುದೇ ನೈತಿಕ ಕೆಡುಕು ಒಂದು ಕಡೆ ಇರುವುದಾದರೆ, "ಶಿಸ್ತು ಕ್ರಮದ ಕೆಡುಕಿನಂತೆ" ವಿವರಿಸುವ ಕೆಡುಕು ಸಹ ಇರುತ್ತದೆ. ಅದರಿಂದ, ದೇವರು ಕರ್ತೃವೂ ಸೃಷ್ಟಿಕರ್ತನೂ ಎಂದು ಕರೆದು ಕೊಳ್ಳುತ್ತಾನೆ.

ಸಮಯದ ಪ್ರಾರಂಭದಲ್ಲಿ ಆತನ ಪ್ರತಿಯೊಂದೂ ಕಾರ್ಯವು "ಬಹಳ ಒಳ್ಳೆಯದಾಗಿದ್ದರೂ" (ಆದಿಕಾಂಡ 1:31)[3] ಆದಾಮ ಮತ್ತು ಹವ್ವರು ಪಾಪಮಾಡಿದಾಗ ದೇವರು ತನ್ನ ಒಳ್ಳೇ ಜಗತ್ತನ್ನು, ಶಪಿಸಲು ಒತ್ತಾಯಿಸಲ್ಪಟ್ಟನು. ಆಗ ಮುಳ್ಳುಗಳು, ಕಳೆಗಳು, ಶ್ರಮೆ, ನೋವು, ರೋಗಗಳು, ಅಪಾಯಗಳು, ಬರಗಾಲಗಳು, ಬಿರುಗಾಳಿಗಳು ಮತ್ತು ಭೂಕಂಪಗಳು ಬಂದವು. ಅವಿಧೇಯತೆಗಾಗಿ ಆದಾಮನ ವಂಶದವರಿಗೂ ದೇವರು, ತನ್ನ ಮಹಾ ಜ್ಞಾನದಲ್ಲಿ ಮರಣವನ್ನು ಶಿಕ್ಷೆಯಂತೆ ನೇಮಿಸಿದನು (ನೋಡಿರಿ ಆದಿಕಾಂಡ 3:17, 18). "ಆದಾಮನಂತೆ ಅಪರಾಧದ ರೀತಿಯಲ್ಲಿ ಪಾಪಮಾಡದೇ ಇರುವವರಿಗೂ ಇದು ಅನ್ವಯವಾಯಿತು" (ರೋಮಾಪುರ 5:14). ತಂದೆಯು ಮತ್ತು ಮಗನು ಒಬ್ಬರೊಬ್ಬರ ಶ್ರಮೆಯನ್ನು ಹಂಚಿಕೊಳ್ಳಬಹುದು, ಆದರೆ ದೋಷಫಲವು ಅನುಭವಿಸಲ್ಪಡಲಿಕ್ಕಾಗುವದಿಲ್ಲ (ಯೆಹೆಜ್ಕೇಲ 18:20). ಪಾಪದ ಪರಿಣಾಮವು ಬದಲಾಯಿಸಲ್ಪಡಬಹುದು (ವಿಮೋಚನಕಾಂಡ 20:5) ಆದರೆ ಅಪರಾಧವನ್ನಲ್ಲ (ರೋಮಾಪುರ 14:12).

ಅನಂತರ ಹಳೇ ಒಡಂಬಡಿಕೆಯ ಚರಿತ್ರೆಯಲ್ಲಿ, ದುಷ್ಟಪಟ್ಟಣವನ್ನು ಸಮಗೊಳಿಸಲು ದೇವರು ವೈರಿಗಳನ್ನು ಕಳುಹಿಸಿದಾಗ ಅದು ಪರಲೋಕದಿಂದ ಕಳುಹಿಸಿದ ಶಿಕ್ಷೆಯಾಗಿತ್ತು. "ಊರಿನಲ್ಲಿ ಕೊಂಬೂದಿದರೆ ಜನರು ಅಂಜರೋ? ಯೆಹೋವನಿಂದಲ್ಲದೆ ಊರಿಗೆ ವಿಪತ್ತು ಸಂಭವಿಸುವುದೋ?" ಎಂದು ಆಮೋಸನು 3:6ರಲ್ಲಿ ಹೇಳಿದ್ದಾನೆ. ದುಷ್ಟತ್ವವು ದಂಡನೆಯಂತೆ ನಿರೂಪಿಸಲ್ಪಟ್ಟದ್ದು, ಯೆರೂಸಲೇಮ ಪಟ್ಟಣಕ್ಕೆ ಸಂಭವಿಸಿದಂಥದ್ದು ಆಗಿದೆ ಎಂದು ಯೆರಮೀಯನು ಒಪ್ಪಿಕೊಂಡನು: "ಇಗೋ, ನನ್ನ ಹೆಸರುಗೊಂಡಿರುವ ಪಟ್ಟಣದಲ್ಲಿ ಬಾಧಿಸಲು ಪ್ರಾರಂಭಿಸುತ್ತೇನೆ. ನೀವು ಆ ದಂಡನೆಗೆ ತಪ್ಪಿಸಿಕೊಂಡೀರೋ? ಆಗುವದೇ ಇಲ್ಲ ..." (ಯೆರೆಮೀಯ 25:29).

ಖಡ್ಗ, ಬರಗಾಲ ಮತ್ತು ನಾಶನಗಳು ಕೆಡುಕಿಗೆ ದೇವರ ಶಿಕ್ಷೆಯ ಉದಾಹರಣೆಗಳಾಗಿವೆ. "ಇಗೋ, ಇವರಿಗೆ ಮೇಲನ್ನಲ್ಲ, ಕೇಡನ್ನೇ ಮಾಡಬೇಕೆಂದು ಎಚ್ಚರಗೊಂಡಿದ್ದೇನೆ ..." (ಯೆರೆಮೀಯ 44:27); "ಇಗೋ, ಈ ವಂಶಕ್ಕೆ ನಾನೇ ಕೇಡನ್ನು ಕಲ್ಪಿಸುತ್ತೇನೆ; ಅದರ ಭಾರದಿಂದ ನಿಮ್ಮ ಕುತ್ತಿಗೆಗಳನ್ನು ತಪ್ಪಿಸಿಕೊಳ್ಳಲಾರಿರಿ, ನೀವು ತಲೆಯೆತ್ತಿ ನಡೆಯುವದಕ್ಕಾಗದು; ಅದು ಕೆಟ್ಟಕಾಲವೇ ಸರಿ" (ಮೀಕ 2:3).

ಯೆಶಾಯ 45:7ರ ಹಿನ್ನೆಲೆಯು ಇನ್ನೂ ಜನಿಸದೇ ಇದ್ದ ಪರ್ಶಿಯಾದ ಅರಸ, ಕೋರೇಷನಿಗೆ ತನ್ನ ಮುಂದೆ ಇರುವ ರಾಜ್ಯಗಳನ್ನು ವಶಪಡಿಸಿಕೊಳ್ಳಲು ದಂಡೆತ್ತಿ ಹೋಗುವಂತೆ ಪರಲೋಕದಿಂದ ಆದೇಶಾಧಿಕಾರ ಕಳಿಹಿಸಲ್ಪಟ್ಟಿದ್ದನ್ನು ಸೂಚಿಸುತ್ತದೆ. ದೇವರು ಅನೇಕ ಜನಾಂಗಗಳ ಮೇಲೆ ಶಿಕ್ಷೆಯ ಕೇಡನ್ನು ಕಳುಹಿಸಲಿರುವನು ಹಾಗೂ ಕೋರೇಷನು ಪರಲೋಕದ ಸಾಧನವಾಗಿರುವನು.

ಆದುದರಿಂದ, ದೇವರು ತಪ್ಪು ಮಾಡುವದರಲ್ಲಿ ಒಳಗೊಳ್ಳದೇ ಇದ್ದರೂ, ತನ್ನ ಪರಿಶುದ್ಧ ಶಿಕ್ಷಿಸುವಿಕೆಯಲ್ಲಿ ಆತನು "ಕೇಡನ್ನು ಸೃಷ್ಟಿಸುತ್ತಾನೆ."

## ದೇವರು ಶಿಸ್ತು ಕ್ರಮದ ಅಳತೆಯಂತೆ ಕೆಡುಕರಿಗೆ ಕಾರಣನಾಗಿದ್ದಾನೆ

ದೇವರ ನಿಯಮಗಳನ್ನು (ನೈಸರ್ಗಿಕ ಇಲ್ಲವೇ ಪ್ರಕಟಿತ) ಉಲ್ಲಂಘಿಸದೇ ಇದ್ದ

ಜನರಿದ್ದಾರೆ. ಆದರೆ ಅವರು ಬಿತ್ತದೇ ಇರುವದನ್ನು ಕೊಯ್ಯುತ್ತಲಿದ್ದಾರೆ (ಗಲಾತ್ಯ 6:7); ಅಂದರೆ, ನಾನಾ ತರದ ನೋವುಗಳನ್ನು ಅನುಭವಿಸುತ್ತಿದ್ದಾರೆ. ತನ್ನ ಹುಣ್ಣುಗಳಿಗೆ ಅರ್ಹನಾಗುವಂಥ ಯಾವುದನ್ನೂ ಯೋಬನು ಮಾಡಿರಲಿಲ್ಲ; ಆದರೆ - ಅವನಿಗೆ ತಿಳಿಯದಂತೆ - ಹುಣ್ಣುಗಳು ಇರುವಂತೆ ಬಿಟ್ಟಿದ್ದರಲ್ಲಿ ದೇವರಿಗೆ ಒಂದು ದೈವಿಯ ಉದ್ದೇಶ ವಿತ್ತು. ದೇವರನ್ನು ಶಪಿಸುವದನ್ನು ತಿರಸ್ಕರಿಸುವಷ್ಟು ಯೋಬನು ಒಳ್ಳೆಯವನಾಗಿದ್ದನು (ಯೋಬ 2:9, 10) ಮತ್ತು ಬಹಳ ತಾಳ್ಮೆಯನ್ನು ಉಪಯೋಗಿಸಿದನು (ಯಾಕೋಬ 5:11). ಹಾಗಿದ್ದರೂ ದೇವರು ಅವನಲ್ಲಿ ಇನ್ನೂ ಅಹಂಬಾವದ ಮತ್ತು ದಂಗೆಯ ಮನೋ ಭಾವವನ್ನು (ನೋಡಿರಿ, ಯೋಬ 13:2, 3; 23:2), ತಾಳ್ಮೆಯ ಕೊರತೆಯನ್ನೂ (ಯೋಬ 21:4) ನೋಡಿದನು, ಅವನಲ್ಲಿ ಕೆಡಿಕಿಡಿಯಾದ ಕಣ್ಣುಗಳಿದ್ದವು (ಯೋಬ 15:12) ಮತ್ತು ತನ್ನ ನಿರ್ಮಾಣಿಕನೊಂದಿಗೆ ವಾದಿಸುವ ಅಪೇಕ್ಷೆ ಇತ್ತು (ಯೋಬ 13:3). ಶ್ರಮೆಯ ದಿನಗಳು ಮನುಷ್ಯನನ್ನು ಕುಗ್ಗಿಸುತ್ತವೆ. ದೇವರ ಗದರಿಸುವಿಕೆಯನ್ನು ಅವನು ಕೇಳಿದಾಗ, "ಧೂಳಿನಲ್ಲಿ ಮತ್ತು ಬೂದಿಯಲ್ಲಿ" ಕುಳಿತುಕೊಂಡು ಅವನು ಮಾನಸಾಂತರಪಟ್ಟನು (ಯೋಬ 42:6). ಕೇಡಿನ ಶಿಕ್ಷೆಯ ಪರಿಣಾಮವಾಗಿ ಅವನು ಮೊದಲಿಗಿಂತ ಹೆಚ್ಚು ಉತ್ತಮ ಮನುಷ್ಯನಾದನು.

ಪೌಲನೂ ಸಹ ತನಗೆ ನೋವು ಕೊಡುತ್ತಿದ್ದ ಹಿಂಸೆಗೆ ಕಾರಣವಾಗಿ ಏನೂ ಮಾಡಿರಲಿಲ್ಲ; "ಶರೀರದಲ್ಲಿಯ ಶೂಲವು" (2 ಕೊರಿಂಥ 12:7) ಅವನನ್ನು ಬಾಧಿಸುತ್ತಿತ್ತು. ಪೌಲನನ್ನು ದೀನನನ್ನಾಗಿ ಇಡುವದಕ್ಕಾಗಿ ಈ ತೀಕ್ಷ್ಣವಾದ ನೋವನ್ನು ದೇವರು ಇಟ್ಟಿದ್ದಾನೆ ಎಂಬುದನ್ನು ತಿಳಿಯದೇ ಪೌಲನು ಪರಿಹಾರಕ್ಕಾಗಿ ಪ್ರಾರ್ಥಿಸಿದನು. ಈ ಶೂಲದ ಕಾರಣಕ್ಕಾಗಿ ದೇವರನ್ನು ಶಪಿಸುವ ಬದಲು, ಹಾಗೆ ತನ್ನ ತಂದೆಯು ಅಷ್ಟು ಪ್ರೀತಿ ಮಾಡಿದನೆಂಬುದಕ್ಕಾಗಿ ಅವನು ಕೃತಜ್ಞನಾಗಿದ್ದನು. "ನಾನು ಬಲಹೀನ ನಾಗಿರುವಾಗಲೇ ಬಲವುಳ್ಳವನಾಗಿದ್ದೇನೆ" ಎಂಬುದನ್ನು ಅರ್ಥ ಮಾಡಿಕೊಂಡನು (2 ಕೊರಿಂಥ 12:10). "ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ" ಎಂದು ಇಬ್ರಿಯ 12:11 ಹೇಳುತ್ತದೆ.

ಯೇಸುವೂ ಸಹ ಶ್ರಮೆಗಳ ಮೂಲಕ ವಿಧೇಯತೆಯನ್ನು ಕಲಿತು ಕೊಳ್ಳ ಬೇಕಾಗಿತ್ತು. ಪರಿಹಾರಕ್ಕಾಗಿ ಆತನು ಪ್ರಾರ್ಥಿಸಿದನು. ಹಾಗಿದ್ದರೂ, ಆತನನ್ನು ಪರಿಪೂರ್ಣನನ್ನಾಗಿ ಮಾಡಲಿಕ್ಕೆ ಆತನಿಗೆ ಶಿಕ್ಷೆಯ ಅಗತ್ಯತೆಯಿತ್ತು ಎಂದು ತಂದೆಯು ನೋಡಿದನು (ಇಬ್ರಿಯ 5:7-9).

## ದೇವರು ಪರಾರ್ಥಕ ಕೇಡಿನ ಕಾರಣವಾಗಿದ್ದಾನೆ

ಯೇಸುವಿನ ಮೇಲೆ ಬಂದ ಭಯಂಕರವಾದ ವೇದನೆಯಲ್ಲಿ, ಆತನ ವೈಯಕ್ತಿಕ ಪರಿಪೂರ್ಣತೆಯಲ್ಲದೇ ಇನ್ನೊಂದು ಉದ್ದೇಶವು ಇತ್ತು, ಅದರಲ್ಲಿ "ನಮಗೋಸ್ಕರವಾಗಿ ಪಾಪಸ್ವರೂಪಿಯಾಗಿ" ಮಾಡಲ್ಪಟ್ಟು (2 ಕೊರಿಂಥ 5:21) "ಆತನು ತಾನೇ ಅನೇಕರ ಪಾಪವನ್ನು ಹೊತ್ತು ಕೊಂಡನು" (ಯೆಶಾಯ 53:12). ಆತನು ಪರಾರ್ಥರವಾಗಿ (ಇತರರ ಪರವಾಗಿ) ಶ್ರಮೆ ತಾಳಿದನು.

ಒಬ್ಬ ಮನುಷ್ಯನು ಕುರುಡನಾಗಿ ಜನಿಸಿದನು, ಇಲ್ಲಿ ತನ್ನ ತಂದೆತಾಯಿಗಳ ಪಾಪದ ಕಾರಣದಿಂದಲ್ಲ (ಕೆಲವು ಸಲ ತಂದೆತಾಯಿಗಳ ಪಾಪದ ಕಾರಣವಾ

ಗಿರುತ್ತದೆ), ಅವನ ಸ್ವಂತ ಪಾಪಗಳ ಕಾರಣವಾಗಿಯೂ ಅಲ್ಲ (ಕೆಲವು ಸಲ ಒಬ್ಬ ವ್ಯಕ್ತಿ ತನ್ನ ಸ್ವಂತ ಕುರುಡುತನಕ್ಕೆ ತಾನೇ ಕಾರಣನಾಗಿರುತ್ತಾನೆ), ಈ ಮನುಷ್ಯನ ಕರುಡುತನಕ್ಕೆ ದೈವಿಯ ನಡಿಸುವಿಕೆಯ ಉದ್ದೇಶವಿತ್ತು (ಯೋಹಾನ 9:1-3). "ಆಹಾ, ದೇವರ ಐಶ್ವರ್ಯವೂ ಹಾಗೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡು ಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!" (ರೋಮಾಪುರ 11:33). ದೇವರ ಆಲೋಚನೆಯು ಪ್ರಕಟಿಸಲ್ಪಟ್ಟಾಗ ಮಾನವರು ಸತತವಾಗಿ ಆಶ್ಚರ್ಯಭರಿತರಾಗಿ ನಿಲ್ಲುತ್ತಾರೆ.

## ಮುಕ್ತಾಯ

ಒಬ್ಬನಿಗೆ ಎಲ್ಲ ಉತ್ತರಗಳು ಇಲ್ಲದಿದ್ದರೆ, ಒಳ್ಳೇದನ್ನು ಮಾಡುವ ಮತ್ತು "ಆಕಾಶದಿಂದ ಮಳೆಯನ್ನೂ ಸುಗ್ಗೀ ಕಾಲಗಳನ್ನೂ ದಯಪಾಲಿಸಿ, ಆಹಾರ ಕೊಟ್ಟು ನಿಮ್ಮ ಮನಸ್ಸುಗಳನ್ನು ಆನಂದದಿಂದ ತುಂಬಿಸುವ" (ಅಪೊಸ್ತಲರ ಕೃತ್ಯಗಳು 14:17), ದೇವರನ್ನು ಆಪಾದಿಸಲು ಇನ್ನೂ ಸಿದ್ಧನಾಗಿರುವದಿಲ್ಲ, ನಂಬಿಕೆಯು ನಿಜವಾದ ಸಂಗತಿಗಳ ಮೇಲೆ ಸ್ಥಾಪಿಸಲ್ಪಟ್ಟಿರುತ್ತದೆ (ಇಬ್ರಿಯ 11:1); ಆದರೆ ಯಾವಾಗಲೂ ವಿಶ್ವದ ಅಂಶವು ನಂಬಿಕೆಯಲ್ಲಿ ಇರುತ್ತದೆ. ನಂಬಿಕೆಯು ಸಂಪೂರ್ಣವಾಗಿ ಪ್ರದರ್ಶಿಸಲ್ಪಡುವಂಥದ್ದಾಗಿದ್ದರೆ, ಅದು ನಂಬಿಕೆಯಾಗಿರುತ್ತಿದ್ದಿಲ್ಲ. ಒಳ್ಳೆಯ ದೇವರಿಗಾಗಿ ಪುರಾವೆಯು ವ್ಯತಿರಿಕ್ತವಾಗಿ ದಾಟಿ ಹೋಗುತ್ತದೆ (ನೋಡಿರಿ ಕೀರ್ತನೆ 40:5), ಯಥಾರ್ಥವಾದ ಮನುಷ್ಯನು, ಎಲ್ಲಾ ಪುರಾವೆಗಳನ್ನು ಯೋಚಿಸಿ, "ನಾನು ನಂಬುತ್ತೇನೆ: ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು" (ಮಾರ್ಕ 9:24) ಎಂದು ಹೇಳಲು ನಡಿಸುತ್ತದೆ. ಗರ್ವದ ಮನೋಭಾವನೆಯು (ನೋಡಿರಿ ರೋಮಾಪುರ 9:20) ಎಂದೂ ಸಮಸ್ಯೆಯನ್ನು ಪರಿಹರಿಸುವದಿಲ್ಲ, ಆದರೆ ನೋವಿಗೆ ಮತ್ತು ದುಃಖಕ್ಕೆ ಯಾವಾಗಲೂ ಕಾರಣವಾಗಿ ಪರಿಣಯಿಸುತ್ತದೆ, ಕೆಡುಕಿನ ಸಮಸ್ಯೆಗಳು ಸಂಪೂರ್ಣವಾಗಿ ಪರಿಹರಿಸಲಾಗದವುಗಳಾಗಿ ಕಂಡು ಬರುವಾಗ, ಒಬ್ಬನ ಜೀವಿತದಲ್ಲಿ ಹೋರಾಟಗಳು ಬರುವಾಗ, ಕರ್ತನನ್ನು ಪ್ರೀತಿಸುವ ಮತ್ತು ನಂಬುತ್ತಾ ಹೋಗುವ ಮನುಷ್ಯನು ಸಂತೋಷವುಳ್ಳವನಾಗಿರುತ್ತಾನೆ. ನಾವು ಅರಿತುಕೊಳ್ಳದೇ ಇರುವಾಗಲೂ, "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" (ರೋಮಾಪುರ 8:28).

ಟಿಪ್ಪಣಿಗಳು

[1]NASBಯಲ್ಲಿ "evil"ಎಂಬುದಕ್ಕೆ "calamity" ("ವಿಪತ್ತು") ಎಂಬುದಿದೆ. [2]David Hume, "Dialogues Concerning Natural Religion," in *Hume Selections,* ed. Charles W. Hendel Jr. (New York: Charles Scribner's Sons, 1955), 365. [3]ಪ್ರತಿಯೊಂದೂ, "ಬಹಳ ಒಳ್ಳೇಯದು" ಆಗಿದ್ದ ಸಮಯದಲ್ಲಿ ಯಾವುದೇ ಕೆಡುಕು ಅಸ್ತಿತ್ವದಲ್ಲಿರಲಿಲ್ಲ; ಪಾಪವು ಬಂದಾಗ, ದಂಡನೆಯಂತೆ, ದೇವರು "ಕೆಡುಕನ್ನು ಸೃಷ್ಟಿಸುವೆನು" ಎಂದು ಹೇಳಿದನು (ಯೆಶಾಯ 45:7), ಇವುಗಳನ್ನು ಸಹ ನೋಡಿರಿ: ಯೆರೆಮೀಯ 25:29; 44:27; ಮೀಕ 1:12; 2:3; ಕೀರ್ತನೆ 125:4, 5; ಯೆಶಾಯ 31:2; ದಾನಿಯೇಲ 9:14.

© 2009 Truth for Today